ಆಲಿಸುವ ಇಂದ್ರಿಯವನ್ನು ನಿಗ್ರಹಿಸಲು ಸಾಧ್ಯವಿದೆ. ಇದು ನಿಷ್ಪ್ರಯೋಜಕ. ಬದಲಾಗಿ ವದಂತಿಗಳು, ಅಶ್ಲೀಲ ಮಾತು, ದೇವನಿಂದೆಯನ್ನು ಕೇಳದಂತೆ ಆದರೆ ದಿವ್ಯಾನಂದವಾದ ಸಂಗೀತವನ್ನು ಆಲಿಸುವಂತೆ ನಾನು ನನ್ನ ಕಿವಿಗೆ ತರಬೇತಿಯನ್ನು ನೀಡಬೇಕು. ಇದರಿಂದ ಸಾವಿರಾರು ಮೈಲಿಗಳ ಆಚೆಯಿಂದಲೂ ನೆರವಿಗಾಗಿ ಕೂಗುವ ದನಿಯನ್ನೂ ಆಲಿಸಬಹುದು. ಸಂತ ರಾಮದಾಸರು ಹೀಗೆ ಮಾಡುತ್ತಿದ್ದರು ಎಂದು ಕೇಳಿದ್ದೇನೆ. ಹಾಗಾದರೆ ಈ ಅವಯವಗಳನ್ನು ಹೇಗೆ ಬಳಸುವುದು? ನಮ್ಮ ಸ್ವಾಧೀನದಲ್ಲಿರುವ ಅತ್ಯಂತ ಕ್ರಿಯಾಶೀಲವಾದ ಶಕ್ತಿಯನ್ನು ಇಡೀ ಬದುಕಿಗಾಗಿ ಅಂದರೆ ಆತ್ಮಕ್ಕಾಗಿ ರಚನಾತ್ಮಕ ಕಾರ್ಯವನ್ನು ಸೃಷ್ಟಿಸಲು ಬಳಸಿಕೊಳ್ಳಬಹುದು. ನಾವು ನಮ್ಮ ಸಹಜವಾದ ಅಪೇಕ್ಷೆಗಳನ್ನು ನಿಯಂತ್ರಿಸಬೇಕು ಮತ್ತು ಅವುಗಳನ್ನು ದಿವ್ಯಾನಂದವಾಗಿ ಪರಿವರ್ತಿಸಬೇಕು. ಇದಕ್ಕಾಗಿ ಗೀತೆಯ 64ನೇ ಸಂಪುಟದ 2ನೇ ಅಧ್ಯಾಯವನ್ನು ಓದು. ದೈವಿಕ ಗೀತೆಯ ಹೊರೆ ಇರುವುದು "ಕದನ ಕಣದಿಂದ ಹಾರಿಹೋಗುವುದಲ್ಲ, ಬದಲಾಗಿ ಬಾಂಧವ್ಯವನ್ನು ಕಳಚಿಕೊಳ್ಳದೇ ಎದುರಿಸುವುದು." ಹಾಗಾಗಿ ಎಲ್ಲ ವಿಧದ ಪುರುಷರು ಮತ್ತು ಮಹಿಳೆಯರ ನಡುವೆ ನಾನು ಮತ್ತು ನೀನು ಹಾಗೂ ನಮ್ಮಲ್ಲಿರುವ ಪ್ರತಿಯೊಬ್ಬರೂ ವಿಚಲಿತರಾಗದೇ ಇರಬೇಕು. ಕೆಲವರನ್ನು ಹೊರತುಪಡಿಸಿದರೆ ದೈಹಿಕ ಏಕಾಂತ ಅಂತೇನೂ ಇರುವುದಿಲ್ಲ. ಆಶ್ರಮ ಈಗ ಇರುವಲ್ಲಿಯೇ ಚೆನ್ನಾಗಿಯೇ ಇದೆ, ಆದರೆ ಇನ್ನಷ್ಟು ಪ್ರಗತಿಯ ಕಡೆಗೆ ನಾವು ಕವಲೊಡೆಯಬೇಕು. ಆದರೆ ನೈಸರ್ಗಿಕವಾದ ವಿಕಾಸಕ್ಕೆ ಅದರದ್ದೇ ಆದ ಸಮಯ ಬೇಕಾಗುತ್ತದೆ.

**ನಮ್ಮೆಲ್ಲರಿಂದ ನಿನಗೆ ಪ್ರೀತಿ**

**ಬಾಪು**

**27-04-1933**

* * *

**ಚಿ. ಮೀರಾ,**

ಈಗ ನನ್ನ ಬಳಿ ನೀನು ಬರೆದ ನಾಲ್ಕು ಪತ್ರಗಳಿವೆ. ಅವುಗಳಲ್ಲಿ ಮೂರು ನಿನ್ನೆ ಒಂದೇ ದಿನ ಬಂದವು. 19ರಂದು ನಾನು ಬೆಳಗಾವಿಯಿಂದ ಹೊರಟಾಗ ನಿನಗೊಂದು ತಂತಿ ಸಂದೇಶ ಕಳಿಸಿದ್ದೆ. ಅದು ಈ ಹೊತ್ತಿಗೆ ನಿನ್ನನ್ನು ತಲುಪಿರುತ್ತದೆ.

ನಂದಿ ಬೆಟ್ಟಕ್ಕೆ ಬರುವಂತೆ ಹೇಳಿ ನಿನಗೊಂದು ತಂತಿ ಕಳಿಸೋಣ ಎಂಬ ನಿರ್ಧಾರ ಮಾಡಿದ್ದೆ. ನಿನ್ನ ಪತ್ರಗಳಲ್ಲಿ ಒಂದು ಹಾಗೆ ನನ್ನನ್ನು ಪ್ರೇರೇಪಿಸಿತ್ತು. ಆದರೆ ನನಗೆ ನಾನೇ ಕಡಿವಾಣ ಹಾಕಿಕೊಂಡೆ. ಉಳಿದೆರಡು ಪತ್ರಗಳು ಕಡಿಮೆ ವಿಷಾದದಿಂದ ಕೂಡಿದ್ದವು. ಆದಾಗ್ಯೂ ನಿನಗೆ ಬಿಟ್ಟಿರಲು ಸಾಧ್ಯವೇ ಇಲ್ಲ ಅನ್ನುವುದಾದರೆ ನನ್ನಿಂದ ಯಾವ ಉತ್ತರವನ್ನೂ ನಿರೀಕ್ಷಿಸದೇ ಅಥವಾ ನನ್ನ ಯಾವ ಪ್ರೇರಣೆಗೂ ಕೂಡ ಕಾಯದೆ ಬಂದುಬಿಡಬಹುದು. ನಿನ್ನ ಸುತ್ತ ಇರುವ ಜನರ ಪ್ರೀತಿ ನಿಜಕ್ಕೂ ದೊಡ್ಡದು. ಅದು ನಿನ್ನನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ ಮತ್ತು ನಿನ್ನನ್ನು ಅಲ್ಲಿಯೇ ಇರುವಂತೆ ಮಾಡುತ್ತದೆ ಎಂಬ ನಂಬಿಕೆ ನನ್ನದು. ಅಲ್ಲಿನ ಜನ ನಿನಗೆ ನೀಡುತ್ತಿರುವ ಪ್ರೀತಿಯನ್ನು ವಿವರಿಸುವ ನಿನ್ನ ಪತ್ರ ಅತ್ಯಂತ ಹೃದಯಸ್ಪರ್ಶಿಯಾಗಿತ್ತು. ಹಾಗಿದ್ದೂ ನೀನು ಅಲ್ಲಿ ನೆಮ್ಮದಿಯಿಂದ ಇಲ್ಲ ಅನ್ನುವುದಾದರೆ ಅದು ವಿಷಾದನೀಯ. ಆದರೆ ಯಾರೊಬ್ಬರೂ ಏಕಾಏಕಿ ತಮ್ಮ ಸ್ವಭಾವವನ್ನು ಬದಲಿಸಿಕೊಳ್ಳಲು ಸಾಧ್ಯವಿಲ್ಲ. ನಿನ್ನನ್ನು ನೀನು ಸಮಾಧಾನಪಡಿಸಿಕೊಳ್ಳುವ ಪ್ರಯತ್ನದಲ್ಲಿಯೂ ವಿಫಲವಾದರೆ ಅಲ್ಲಿನ ನಿನ್ನ ಗೆಳೆಯರಿಗೆ ನೋವಿನ ವಿದಾಯವನ್ನು ಹೇಳಿ ಇಲ್ಲಿಗೆ ಆಗಮಿಸಲು ಸಣ್ಣ ಹಿಂಜರಿಕೆಯೂ ಬೇಡ. ಯಾವ ಕಾರಣಕ್ಕೂ ಮನಸ್ಸು ಕುಗ್ಗಬೇಕಾಗಿಲ್ಲ. ಹಾಗೆ ಕುಗ್ಗುವವರೆಗೂ ನೀನು ನಿನ್ನ ಆತಂಕವನ್ನು ಲಂಬಿಸಬೇಕಾದ ಅಗತ್ಯವಿಲ್ಲ.

ನಾನಿಲ್ಲಿ ಕಳೆಯುತ್ತಿರುವುದು ಈಗ ಆರನೇ ದಿನ. ಆದರೂ ಇಲ್ಲಿನ ವಾತಾವರಣಕ್ಕೆ ಹೊಂದಿಕೊಂಡಿಲ್ಲ. ಅಂಬೋಲಿಯಲ್ಲಿ ಇದ್ದಾಗ ಹೆಚ್ಚು ಶಕ್ತಿ ಪಡೆದುಕೊಂಡಿದ್ದೆ. ಆದರೆ ಅಂಬೋಲಿಗಿಂತ ನಿಮಗೆ ನಂದಿ ಹೆಚ್ಚು ಅನುಕೂಲವಾಗಲಿದೆ ಎಂದು ವೈದ್ಯರು ಭರವಸೆ ನೀಡಿದ್ದಾರೆ. ರಕ್ತದೊತ್ತಡದಂತಹ ಸಮಸ್ಯೆ ಇರುವವರಿಗೆ ಇದು ಹೇಳಿಮಾಡಿಸಿದ ತಾಣ ಎನ್ನುವುದು ಅವರ ಅಂಬೋಣ. ಹಾಗಾಗಿ ಯಾವುದೇ ಚಿಂತೆ ಅಥವಾ ಆತಂಕಕ್ಕೆ ಅವಕಾಶವಿಲ್ಲ.

ಹಿಂದಿನ ಎರಡು ಉಪವಾಸಗಳನ್ನು ನೀನು ಮರೆತೇ ಬಿಟ್ಟಿರುವುದರಿಂದ ನೀನೇ ಉಪವಾಸ ಕೈಗೊಂಡಿದ್ದು ಒಳ್ಳೆಯದಾಯಿತು. ನರಗಳ ಒತ್ತಡಕ್ಕೆ ಒಳಗಾದಾಗ ಉಪವಾಸ ಕೈಗೊಳ್ಳುವುದು ದೇಹಕ್ಕೂ ಉತ್ತಮ ಎನ್ನುವುದರಲ್ಲಿ ಅನುಮಾನವಿಲ್ಲ. ನಾನು